ಬಣ್ಣಬಣ್ಣದ ಚಿಟ್ಟೆಗಳ ಥರ ಹೆಚ್ಚಿನ ಕವಿತೆಗಳು ನನ್ನಲ್ಲಿ ಆಕರ್ಷಣೆ ಮೂಡಿಸಿದ ಹುಡುಗರಿಗೆ ಅರ್ಪಿತವಾಗಿದ್ದವು. ನಾನಾಗ ಪದ್ಯಗಳನ್ನೇ ಹೆಚ್ಚಾಗಿ ಓದುತ್ತಿದ್ದೆ. ಮುಂದೊಂದು ದಿನ ಅದು ನನ್ನದೇ ಆದ ಬರವಣಿಗೆಯ ಶೈಲಿಯೊಂದನ್ನು ರೂಢಿಸಿಕೊಳ್ಳಲು ಸಹಾಯ ಮಾಡಿತು. ಆದರೆ ನನ್ನ ಕವನ ಕೇಳಿ ಯಾರೂ ಇಂಪ್ರೆಸ್ ಆಗಲಿಲ್ಲ... ಆ ಮಾತು ಬೇರೆ!

◆ **ಕವಿತೆ ಹುಟ್ಟುವ ಕ್ಷಣ ಹೇಗಿರುತ್ತೆ?**

ನಮಗಿಂತ ಮುಂಚೆ ಇದ್ದವರು ಎಲ್ಲಿಗೆ ಹೋದರು ಯಾರಿಗಾದರೂ ಗೊತ್ತಾ? ನಮ್ಮ ನಂತರ ಬರುವವರು ಈಗ ಎಲ್ಲಿದ್ದಾರೆ!? ಪ್ರತಿ ಕವಿತೆಯೂ ಹಾಗೇ. ತನಗೆ ಬೇಕಾದಾಗ ಜನ್ಮ ತಾಳುತ್ತದೆ. ತಾಂತ್ರಿಕವಾಗಿ ವಿವರಿಸುವುದಾದರೆ, ಬಹುಶಃ ನಿಮ್ಮ ತಲೆಯಲ್ಲಿ ಕಾಣಿಸಿಕೊಳ್ಳುವ ಒಂದು ಸಾಲು, ನಂತರದ ಇತರ ಸಾಲುಗಳಿಗೆ ಜನ್ಮ ನೀಡುತ್ತದೆ. ಕೆಲವೊಮ್ಮೆ ಪದ್ಯ ಮನಸ್ಸಿನಲ್ಲೇ ಪೂರ್ಣವಾಗಿ ಮೂಡಿ, ನಂತರ ಔಪಚಾರಿಕವಾಗಿ ಹಾಳೆಗಿಳಿಯುತ್ತದೆ. ಇನ್ನು ಕೆಲವೊಮ್ಮೆ ನಾವದನ್ನು ಮತ್ತೆ ಸರಿಯಾಗಿ ನೋಡಬೇಕು, ಪುನಃ ರಮಿಸಬೇಕು, ತಿದ್ದಿ ತೀಡಬೇಕು, ಅದರ ಮೇಲೆ ಒಟ್ಟಾರೆ ಕೆಲಸ ಮಾಡಬೇಕು. ಆದರೆ ಸ್ಫೂರ್ತಿಯ, ಮೊದಲ ಕಿಡಿ, ಪೂರ್ತಿಯಾಗಿ ತಂತಾನೇ ಹುಟ್ಟಿಕೊಳ್ಳುತ್ತದೆ!

◆ **ನಿಮ್ಮ 'The Symmetry of the Bodies' ಎಂಬ ಸಂಕಲನದ ಶೀರ್ಷಿಕೆ ಕುತೂಹಲ ಮೂಡಿಸಿತು. ಇದರ ಹಿಂದಿರುವ ತುಡಿತಗಳೇನು?**

ಈ ಸಂಕಲನದ ಕವಿತೆಗಳು ಒಬ್ಬ ಹೆಣ್ಣಿನ ಆಧ್ಯಾತ್ಮಿಕ ಪಯಣವನ್ನು ಬೆಂಬತ್ತಿ ಸಾಗುತ್ತವೆ. ಆಕೆ ಬಗೆಬಗೆಯ ಭಾವನಾತ್ಮಕ ಹಂತಗಳ ಮೂಲಕ ಮಾತ್ರವಲ್ಲದೇ, ವಾಸ್ತವಿಕ ಬದುಕಿನ ಹಲವು ಹಂತಗಳ ಮೂಲಕವೂ ಹಾದು ಹೋಗುತ್ತಾಳೆ. ಇದೊಂದು ಸಾಹಸವೇ ಸೈ. ಮನುಷ್ಯನ ನೈತಿಕತೆ ಹಾಗೂ ಆತ್ಯಂತಿಕ ಚೆಲುವನ್ನು ಒಟ್ಟಿಗೇ ಹಿಡಿಯುವುದು, ವಾಸ್ತವವಾಗಿ ಅಸ್ತಿತ್ವದಲ್ಲಿರುವ ಎಲ್ಲದರ ಅದ್ಭುತ ಸಂಯೋಜನೆಯನ್ನು, ಕೆಲವೊಮ್ಮೆ ಇಡಿಯಾಗಿ ಮತ್ತೆ ಕೆಲವೊಮ್ಮೆ ಬಿಡಿಯಾಗಿ, ಪರೀಕ್ಷಿಸಿ ನೋಡುವ ಧರ್ಮಪಥದ ಕಲ್ಪನೆ ಇದರ ಸಾಮಾನ್ಯ ಸೂತ್ರವಾಗಿದೆ. ಕಾಶ್ಮೀರಿ ಶೈವ ಮಾತ್ರವಲ್ಲ ಸೂಫಿ ದರ್ಶನ, ತಾವೊ ದರ್ಶನ ಹಾಗೂ ಝೆನ್ ಕೂಡ ಖಂಡಿತವಾಗಿ ನನ್ನ ಒಳನೋಟ ಹಾಗೂ ಕಾವ್ಯದ ನಡೆಯ ಮೇಲೆ ಪರಿಣಾಮ ಬೀರಿವೆ.

◆ **ಕಾಶ್ಮೀರದ ಲಲ್ಲೇಶ್ವರಿಯನ್ನು ಅನುವಾದಿಸಿದಿರಿ. ಈಗ ನಡುಗನ್ನಡದ ಅಕ್ಕ ಮಹಾದೇವಿಯನ್ನು ನಿಮ್ಮ ಭಾಷೆಗೆ ತರ್ಜುಮೆ ಮಾಡುತಿದ್ದೀರಿ.ಇವತ್ತಿನ ಕಾಲಕ್ಕೆ ನಿಮಗವರು ಯಾಕೆ ಪ್ರಸ್ತುತ ಎನಿಸುತ್ತಿದೆ?**

ಮರೆಯಬೇಡಿ. ಎರಡನ್ನೂ ನಾನು ಇಂಗ್ಲಿಷ್‌ನಿಂದ ಅನುವಾದಿಸಿದ್ದೇನೆ. ಅದೇ ದುರಂತ. ದುರದೃಷ್ಟವಶಾತ್, ನನಗೆ ಕಶ್ಮೀರಿ ಅಥವಾ ಕನ್ನಡ ಗೊತ್ತಿಲ್ಲದ್ದರಿಂದ ಅನುವಾದಕ್ಕೆ ಇಂಗ್ಲಿಷ್‌ನ ಮೊರೆ ಹೋಗಬೇಕಾಯಿತು. ನಾನು ಆರಂಭಿಸುವ ಈ ಕೆಲಸವನ್ನು ಯಾರಾದರೂ ಹಿಂದಿ ಸಾಹಿತ್ಯದ ಪ್ರಾಧ್ಯಾಪಕರು ಮುಂದುವರಿಸುತ್ತಾರೆ ಎಂದು ಆಶಿಸುತ್ತೇನೆ. ಸ್ತ್ರೀ ಆಧ್ಯಾತ್ಮಿಕತೆಯ ಬಗ್ಗೆ ನನಗಿದ್ದ ಆಸಕ್ತಿಯಿಂದಾಗಿ ನಾನು ಈ ಅನುವಾದ ಯೋಜನೆಯನ್ನು ಕೈಗೆತ್ತಿಕೊಂಡೆ. ಮಹಿಳೆಯರಿಗೆ ಆಧ್ಯಾತ್ಮಿಕ ಜೀವನ ನಡೆಸಲು ಚಾರಿತ್ರಿಕ ಉಲ್ಲೇಖಗಳು, ಉದಾಹರಣೆಗಳು, ಮಾದರಿಗಳು ಬೇಕಾಗುತ್ತವೆ ಅನ್ನೋದು ನನ್ನ ನಂಬಿಕೆ. ಮಹಿಳೆಯರು ಸದಾ ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳುವುದಕ್ಕಷ್ಟೇ ಬಂಧಿತರಾಗಿದ್ದಾರೆ. ಸಾಮಾನ್ಯವಾಗಿ ಸಾಂಪ್ರದಾಯಿಕ ಧರ್ಮಗಳಲ್ಲಿ ಯಾವುದೇ ಮುಖ್ಯ ಧಾರ್ಮಿಕ ಪಾತ್ರಗಳಿಂದ ಅವರು ಹೊರಗಿಡಲ್ಪಟ್ಟಿದ್ದಾರೆ. ಆದರೆ ತಂತ್ರ ಮತ್ತು ಇತರ 'ನಿಷಿದ್ಧ' ಎಂದು ಕರೆಯಬಹುದಾದ ಭಾರತೀಯ ಗುಪ್ತ ಪರಂಪರೆಗಳಲ್ಲಿ, ಮಹಿಳೆಯರೇ ಮಾರ್ಗದರ್ಶಕರಾಗುತ್ತಾರೆ ಮತ್ತು ಗುರುಗಳಾಗುತ್ತಾರೆ. ಇದು ಬಹಳ ಮಹತ್ವಪೂರ್ಣ ವಿಚಾರವಾಗಿದ್ದು, ಸ್ತ್ರೀಚೈತನ್ಯ ಹಾಗೂ ಬಂಡಾಯದ ನಡೆಯಾಗಿದೆ. ಮತ್ತಿದು ಮಾತೃಪ್ರಧಾನ ಸಮಾಜದ ಅದ್ಭುತ ಕೊಡುಗೆ ಎನ್ನಬಹುದು. ಇಂದು ಪಶ್ಚಿಮದಲ್ಲಿ ಹೆಣ್ಣುಮಕ್ಕಳು ತಮ್ಮ ಹಕ್ಕಿನ ಸ್ಥಾನವನ್ನು ಮರಳಿ ಪಡೆಯುತ್ತಿದ್ದಾರೆ ಮತ್ತು ಧೈರ್ಯದಿಂದ ತಮ್ಮದೇ ಆದ ಆಧ್ಯಾತ್ಮಿಕ ಪಥವನ್ನು ಅನುಸರಿಸುತ್ತಿದ್ದಾರೆ. ಹಾಗಾದರೂ ಸಹ, ಕ್ಯಾಥೊಲಿಕ್ ಮತ ಪಂಗಡವು ಮಹಿಳೆಯರನ್ನು